ಶಿಕ್ಷಣದಿಂದ ಶ್ರೇಷ್ಠತೆ

**ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು – 570 012

ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆ ಹಾಗೂ ನ್ಯಾಕ್‌ನಿಂದ "ಎ" ಶ್ರೇಣಿಯ ಮಾನ್ಯತೆ ಪಡೆದಿದೆ

ಶ್ರೇಷ್ಠತೆಯ ಸಾಮರ್ಥ್ಯವಿರುವ ಕಾಲೇಜು

---

ದಿನಾಂಕ 30.12.2019

# ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಇಂದಿನ ಯುವಶಕ್ತಿ ಮುಖ್ಯ – ಡಾ. ಗುಬ್ಬಿಗೂಡು ರಮೇಶ್



ಮೈಸೂರು, ಡಿಸೆಂಬರ್ 30 – ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಇಂದಿನ ಯುವಶಕ್ತಿ ಮುಖ್ಯ, ಹಾಗೆಯೇ ಇಂದಿನ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣದ ಅಗತ್ಯವಿದೆ ಎಂದು ಕನ್ನಡ ಅಭಿವೃದ್ದಿ ಪ್ರಾಧಿಕಾರದ ಸದಸ್ಯರಾದ ಡಾ. ಗುಬ್ಬಿಗೂಡು ರಮೇಶ್ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ 'ಮಂದಾರ' ವಾರ್ಷಿಕ ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ಸಮಾರಂಭದ ಮುಖ್ಯ ಅತಿಥಿಯಾಗಿದ್ದ ಡಾ. ಗುಬ್ಬಿಗೂಡು ರಮೇಶ್‌ರವರು ಇಂದಿನ ಯುವ ಪೀಳಿಗೆ ನಡೆಯುತ್ತಿರುವ ದಾರಿ ಆತಂಕಕ್ಕೆಡೆ ಮಾಡಿದೆ. ಸಮಾಜ ಛಿದ್ರ ಛಿದ್ರಗೊಳಿಸುವ ಹುನ್ನಾರದ ಕೈಗೊಂಬೆಗಳಾಗಿ ಯುವಜನರು ಮಾರ್ಪಾಡಾಗುತ್ತಿದ್ದಾರೆ. ವರ್ತಮಾನದ ತರ್ಕಗಳಿಗೆ ಉತ್ತರವನ್ನು ಹುಡುಕಬೇಕಾಗಿದೆ. ಇದನ್ನು ತಡೆಗಟ್ಟಬೇಕಾದರೆ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣದ ಜೊತೆ, ನವ ಆರೋಗ್ಯಕರ ಸಮಾಜನ ನಿರ್ಮಾಣ ಮಾಡುವ ಆತ್ಮವಿಶ್ವಾಸ, ನೈಪುಣ್ಯ ಹಾಗೂ ಕೌಶಲ್ಯಾಧಾರಿತ ತರಬೇತಿಯನ್ನು ನೀಡಬೇಕಾಗುತ್ತದೆ ಎಂದರು.



ಈ ದೇಶದ ಹಿನ್ನೆಲೆಗೆ ಒಂದು ಚರಿತ್ರೆ ಇದೆ. ವಿದ್ಯಾರ್ಥಿಗಳು ಹೊರಗಿನ ಯಾವ ಆಕರ್ಷಣೆಗೂ ಒಳಗಾಗದೆ, ಕನ್ನಡ ಸಂಸ್ಕೃತಿಯನ್ನು ಎತ್ತಿಹಿಡಿಯುವ ಕೆಲಸವನ್ನು ಯುವ ವಿದ್ಯಾರ್ಥಿಗಳ ಮಾಡಬೇಕು, ವಿದ್ಯಾರ್ಥಿಗಳಿಗೆ ಹಿಂದೆ ಗುರು ಹಾಗೂ ಮುಂದೆ ಗುರಿ ಇರಬೇಕು, ಗುರಿ ಮುಟ್ಟಲು ಆತ್ಮವಿಶ್ವಾಸ ಮತ್ತು ಛಲ ಇರಬೇಕು, ಇದನ್ನು ನಿಮ್ಮ ಜೀವನದಲ್ಲಿ ರೂಢಿಸಿಕೊಳ್ಳಿ ಎಂದು ಕಿವಿ ಮಾತು ಹೇಳಿದರು.

ಮುಂದುವರಿದು ಮಾತನಾಡುತ್ತಾ, ಉನ್ನತ ಹುದ್ದೆಯಲ್ಲಿರುವ ಶೇಕಡ 70 ರಷ್ಟು ಪ್ರತಿಭಾವಂತ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶಗಳಿಂದ ಬಂದವರು, ನಮ್ಮಲ್ಲಿ ದೇಶೀ ಪ್ರತಿಭೆಗೆ ತುಂಬಾ ಮಹತ್ವವಿದೆ ಎಂದರು.

ಈ 'ಮಂದಾರ' ವಾರ್ಷಿಕ ಸಂಚಿಕೆಯ ಲೇಖನಗಳನ್ನು ಓದಿದಾಗ ಇಂದಿನ ವಿದ್ಯಾರ್ಥಿಗಳಲ್ಲಿ ಕನ್ನಡ ಪ್ರೇಮ, ದೇಶಪ್ರೇಮ ಹಾಗೂ ಮೌಲ್ಯಾಧಾರಿತ ಗುಣಮಟ್ಟವು ಹೆಚ್ಚಾಗಿ ಕಂಡುಬರುತ್ತಿದೆ ಎಂದು ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪೂಜಾ ಭಾಗವತ್ ಮಹಾಜನ ಸ್ನಾತಕೋತ್ತರ ಸಂಸ್ಥೆಯ ನಿರ್ದೇಶಕರಾದ ಡಾ. ಸಿ.ಕೆ. ರೇಣುಕಾರ್ಯರವರು ಮಾತನಾಡುತ್ತಾ, ವಿದ್ಯಾರ್ಥಿಗಳಿಗೆ ಕೇವಲ ಪಠ್ಯಪುಸ್ತಕದಲ್ಲಿನ ಜ್ಞಾನಾರ್ಜನೆ ಸಾಲದು, ಅವರ ಜೀವನಕ್ಕೆ ಕೌಶಲ್ಯಾಧಾರಿತ ತರಬೇತಿ ಮತ್ತು ಜ್ಞಾನ ಮುಖ್ಯವಾಗುತ್ತದೆ. ಇಂದು ವಿದ್ಯಾಭ್ಯಾಸ ಎಂಬುದು ತೋರಿಕೆಯಾಗಿದೆ. ವಿದ್ಯಾರ್ಥಿಗಳಲ್ಲಿ ನೈಪುಣ್ಯತೆಯ ಕೊರತೆ ಎದ್ದು ಕಾಣುತ್ತಿದೆ. ವಿದ್ಯಾರ್ಥಿಗಳಲ್ಲಿ ಜ್ಞಾನವನ್ನು ಉದ್ದೀಪನಗೊಳಿಸಿ, ಜೀವನೋತ್ಸಾಹದ ಚಿಲುಮೆಯನ್ನು ಹೊಮ್ಮಿಸಬೇಕು. 'ಮಂದಾರ' ವಾರ್ಷಿಕ ಸಂಚಿಕೆಯು ಅತ್ಯುತ್ತಮ ಬರಹ, ಲೇಖನಗಳಿಂದ ಕೂಡಿದೆ ಎಂದು ಲೇಖಕರಿಗೆ, ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.

ಬೆಂಗಳೂರಿನ ವಿವೇಕಾನಂದ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ಲಿಂಗರಾಜಯ್ಯವರು ಸಮಾರಂಭದ ಅಧ್ಯಕ್ಷೀಯ ನುಡಿಗಳನ್ನಾಡಿ, ಈ ಕಾಲೇಜಿಗೆ ಇತಿಹಾಸಕ್ಕೆ ಒಂದು ಪರಂಪರೆ ಮತ್ತು ಐತಿಹ್ಯವಿದೆ. ರಾಷ್ಟ್ರ ನಿರ್ಮಾಣ, ಆರೋಗ್ಯಕರ ಸಮಾಜ ಕಟ್ಟುವ ನಿಟ್ಟಿನಲ್ಲಿ ಈ ಕಾಲೇಜು ಪ್ರತಿಭಾವಂತ ವಿದ್ಯಾರ್ಥಿಗಳ ಕೊಡುಗೆ ಅಪಾರ. ಇದು ಈ ಕಾಲೇಜಿನ ಗುಣಾತ್ಮಕ ಶಿಕ್ಷಣಕ್ಕೆ ಮಾದರಿ ಎನಿಸಿದೆ. ಇಂದು ಗೂಗಲ್ ಯುಗ. ಮಾನವನು ಕೆಟ್ಟ ಚಟಕ್ಕೆ ದಾಸನಾಗಿ, ದುರ್ವತನೆಗೆ ಬಲಿಯಾಗಿ, ವಿಕೃತಿಯಾಗುತ್ತಿದ್ದಾನೆ. ಇದನ್ನು ತಡೆಯುವ ಜವಾಬ್ದಾರಿ ಇಂದಿನ ಯುವಜನಾಂಗದ ಮೇಲಿದೆ. ಮೌಲ್ಯಯುತ ಸಮಾಜ ಕಟ್ಟಲು ಪ್ರತಿಯೊಬ್ಬ ವಿದ್ಯಾರ್ಥಿಯೂ ಪಣ ತೊಡಬೇಕೆಂದರು.

'ಮಂದಾರ' ವಾರ್ಷಿಕ ಸಂಚಿಕೆಯ ಬಗ್ಗೆ ಮಾತನಾಡುತ್ತಾ, ಪುಸ್ತಕದಲ್ಲಿನ ಕೃತಿಗಳು ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕೈಗನ್ನಡಿಯಾಗಿದೆ ಎಂದು ಅಭಿಮಾನದ ನುಡಿಗಳನ್ನಾಡಿದರು.

ಪ್ರಸ್ತಾವಿಕ ನುಡಿಗಳನ್ನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ವೆಂಕಟರಾಮು ಅವರು 'ಮಂದಾರ' ವಾರ್ಷಿಕ ಸಂಚಿಕೆಯ ಬಿಡುಗಡೆ ಸಮಾರಂಭವು ಚಾರಿತ್ರಿಕ, ಸಾಂಸ್ಕೃತಿಕ ವಿಶೇಷ ಸಮಾವೇಶ. ಇಲ್ಲಿನ ಲೇಖನಗಳು ವಿದ್ಯಾರ್ಥಿಗಳ ಅನುಭವಕ್ಕೆ ದೊರೆತ ಪ್ರತಿಬಿಂಬ. ಈ ಸಂಚಿಕೆಯಲ್ಲಿ ಲೇಖನಗಳು, ಛಾಯಾಚಿತ್ರಗಳು, ವ್ಯಂಗ್ಯಚಿತ್ರ, ಚುಟುಕು, ರೇಖಾ ಚಿತ್ರ, ಹನಿಗವನ, ಹಾಸ್ಯ, ಕಥೆ ಎಲ್ಲವೂ ಒಳಗೊಂಡಿದ್ದು, ಮಾಹಿತಿ ಕಣಜ. ಇದನ್ನು ಹೊರತರುವಲ್ಲಿ ಯಶಸ್ವಿಯಾದ ಸಂಪಾದಕರ ಮಂಡಳಿ ಸದಸ್ಯರುಗಳಿಗೆ, ಕಾಲೇಜಿನ ಅಧ್ಯಾಪಕರು ಮತ್ತು ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳಿಗೆ ಕೃತಜ್ಞತೆ ಅರ್ಪಿಸಿದರು.

ವೇದಿಕೆಯಲ್ಲಿ ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಡಾ. ಎಸ್. ಆರ್. ರಮೇಶ್ ಮತ್ತು ಉಪಪ್ರಾಂಶುಪಾಲರಾದ ಶ್ರೀಮತಿ ಬಿ.ಆರ್. ಜಯಕುಮಾರಿ ಉಪಸ್ಥಿತರಿದ್ದರು.

ಕು. ಭಾರತಿ ಪ್ರಾರ್ಥಿಸಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್.ಆರ್. ತಿಮ್ಮೇಗೌಟ ಸ್ವಾಗತ ಕೋರಿ, ಅತಿಥಿಗಳನ್ನು ಪರಿಚಯಿಸಿದರು. ಡಾ. ದೊಡ್ಡರಸಯ್ಯ ಜಿ, ಸಹಾಯಕ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಇವರು ವಂದನಾರ್ಪಣೆ ನೆರವೇರಿಸಿದರು. ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಸಿದ್ದಪ್ಪ ಕಾರ್ಯಕ್ರಮ ನಿರೂಪಿಸಿದರು. ಸಮಾರಂಭದಲ್ಲಿ ಬೋಧಕ ವರ್ಗ, ಬೋಧಕೇತರ ವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

**ಪ್ರಾಂಶುಪಾಲರು**

ಪ್ರಕಟಣೆಯ ಕೃಪೆಗಾಗಿ

ಗೆ,

ಸಂಪಾದಕರು,